# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 832 |
| ವಿಧಾನಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ರಮೇಶ್ ಬಾಬು (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 10.03.2026 |
| ಉತ್ತರಿಸುವ ಸಚಿವರು | : | ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು. |

*****

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ತುಮಕೂರು ಜಿಲ್ಲೆ ಚಿಕ್ಕನಾಯಕನ ಹಳ್ಳಿ ತಾಲ್ಲೂಕಿನಲ್ಲಿ ಇರುವ ಕೃಷಿ ಮಾರುಕಟ್ಟೆ ಕೇಂದ್ರಗಳ ಸಂಖ್ಯೆ ಎಷ್ಟು; ಚಿಕ್ಕನಾಯಕನಹಳ್ಳಿ ಪ್ರಮುಖ ಎಪಿಎಂಸಿ ಮಾರುಕಟ್ಟೆ ಯನ್ನು ಯಾವಾಗ ಉಪ ಮಾರುಕಟ್ಟೆಯಾಗಿ ಪರಿವರ್ತಿಸ ಲಾಯಿತು; ಇದಕ್ಕೆ ಕಾರಣಗಳೇನು; | ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಹುಳಿಯಾರು ಮುಖ್ಯ ಮಾರುಕಟ್ಟೆ ಪ್ರಾಂಗಣ ಮತ್ತು ಚಿಕ್ಕನಾಯಕನಹಳ್ಳಿ ಹಾಗೂ ಹಂದನಕೆರೆ ಉಪ ಮಾರುಕಟ್ಟೆ ಪ್ರಾಂಗಣಗಳಿವೆ.<br><br>ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966ರ ಕಲಂ 4 ರಡಿ ಒಂದು ಮಾರುಕಟ್ಟೆ ಸಮಿತಿಯ ಮಾರುಕಟ್ಟೆ ಕ್ಷೇತ್ರವು ಒಂದು ತಾಲ್ಲೂಕಿಗಿಂತ ಕಡಿಮೆ ಇರಬಾರದೆಂದು ನಿಗದಿಪಡಿಸಿರುವುದರಿಂದ ಮತ್ತು ಇಡೀ ಚಿಕ್ಕ ನಾಯಕನಹಳ್ಳಿ ತಾಲ್ಲೂಕಿನಲ್ಲಿ ಅಧಿಸೂಚಿತ ಕೃಷಿ ಉತ್ಪನ್ನಗಳ ಮಾರಾಟ ನಿಯಂತ್ರಣವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವುದು ಅವಶ್ಯಕವೆಂದು ಪರಿಗಣಿಸಿ ಚಿಕ್ಕನಾಯಕನಹಳ್ಳಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯನ್ನು ಮತ್ತು ಹುಳಿಯಾರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯನ್ನು ಸಂಯೋಜಿಸಿ ಇಡೀ ಚಿಕ್ಕನಾಯಕನಹಳ್ಳಿ ತಾಲ್ಲೂಕನ್ನು ಮಾರುಕಟ್ಟೆ ಕ್ಷೇತ್ರವೆಂದು ಹಾಗೂ ಸಂಯೋಜಿತ ಮಾರುಕಟ್ಟೆ ಸಮಿತಿಯನ್ನು ಹುಳಿಯಾರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಎಂದು 2001 ರಲ್ಲಿ ಸ್ಥಾಪಿಸಲಾಗಿರುತ್ತದೆ.<br><br>ಅದರಂತೆ, ಕಾಯ್ದೆ ಕಲಂ 6(2) ರಡಿ ಪ್ರದತ್ತವಾದ ಅಧಿಕಾರದ ಮೇರೆಗೆ ಚಿಕ್ಕನಾಯಕನಹಳ್ಳಿ ಪಟ್ಟಣ ಪರಿಮಿತಿಯೊಳಗಿನ ಪ್ರದೇಶವನ್ನು ಉಪ ಮಾರುಕಟ್ಟೆ ಎಂದೂ ಮತ್ತು ವ್ಯಾಪಾರ ವಹಿವಾಟು ನಡೆಯುವ ಸೀಮಬದ್ಧ ಸ್ಥಳವನ್ನು ಉಪ ಮಾರುಕಟ್ಟೆ ಪ್ರಾಂಗಣ ಎಂದು 2001 ರಲ್ಲಿ ಅಧಿಸೂಚನೆ ಮೂಲಕ ಘೋಷಿಸಲಾಗಿರುತ್ತದೆ. |

| | | |
|---|---|---|
| (ಆ) | ಚಿಕ್ಕನಾಯಕನಹಳ್ಳಿ ಎಪಿಎಂಸಿ ಮಾರುಕಟ್ಟೆಯ ಒಟ್ಟು ವಿಸ್ತೀರ್ಣ ಎಷ್ಟು; ಎಷ್ಟು ಮಳಿಗೆಗಳನ್ನು ಹೊಂದಿರುತ್ತದೆ; ಎಪಿಎಂಸಿ ವಿಸ್ತೀರ್ಣದಲ್ಲಿ ಇತರೆ ಯಾವ ಯಾವ ಸರ್ಕಾರಿ ಕಛೇರಿಗಳಿಗೆ ಜಾಗವನ್ನು ನೀಡಲಾಗಿರುತ್ತದೆ; (ವಿವರ ನೀಡುವುದು) | 1. ಚಿಕ್ಕನಾಯಕನಹಳ್ಳಿ ಉಪ ಮಾರುಕಟ್ಟೆ ಪ್ರಾಂಗಣ ಒಟ್ಟು 16.22 ಎಕರೆ ವಿಸ್ತೀರ್ಣ ಹೊಂದಿದೆ.<br>2. ಸದರಿ ಮಾರುಕಟ್ಟೆಯು 49 ಮಳಿಗೆಗಳನ್ನು ಹೊಂದಿರುತ್ತದೆ.<br>3. **ಚಿಕ್ಕನಾಯಕನಹಳ್ಳಿ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಈ ಕೆಳಕಂಡ ಸರ್ಕಾರಿ ಕಛೇರಿಗಳಿಗೆ ಸ್ಥಳಾವಕಾಶ ಕಲ್ಪಿಸಲಾಗಿದೆ.**<br>i) ಸರ್ಕಾರಿ ಆಸ್ಪತ್ರೆ ನಿರ್ಮಾಣದ ಉದ್ದೇಶಕ್ಕಾಗಿ 3.20 ಎಕರೆ ಜಮೀನನ್ನು ಆರೋಗ್ಯ ಇಲಾಖೆಗೆ ರೂ.60,000/- ಗಳಿಗೆ ಹಂಚಿಕೆ ಮಾಡಲು ಕೃಷಿ ಮಾರಾಟ ಇಲಾಖೆಯ ಕೇಂದ್ರ ಕಛೇರಿಯ ದಿನಾಂಕ:23.07.1993ರ ಆದೇಶದಲ್ಲಿ ಅನುಮತಿ ನೀಡಲಾಗಿರುತ್ತದೆ.<br>ii) ಸರ್ಕಾರದ ಪತ್ರ ಸಂ:ಸಮಾತೊ/81/ಎಂಆರ್ಇ/99, ದಿನಾಂಕ:15.05.1999 ರಲ್ಲಿನ ಆದೇಶದಂತೆ 01 ಎಕರೆ ಜಮೀನನ್ನು ಪಂಪ್‌ಹೌಸ್ ಮತ್ತು ಬೋರ್‌ವೆಲ್ ಇರುವ ಜಾಗವನ್ನು ಹೊರತುಪಡಿಸಿ ಅರಣ್ಯ ಇಲಾಖೆಗೆ ಹಂಚಿಕೆ ಮಾಡಲು ದಿನಾಂಕ:16.06.1999ರಂದು ಕೃಷಿ ಮಾರಾಟ ಇಲಾಖೆಯ ಕೇಂದ್ರ ಕಛೇರಿ ಆದೇಶದಲ್ಲಿ ಮಂಜೂರಾತಿ ನೀಡಲಾಗಿರುತ್ತದೆ. **(ಆದೇಶದ ಪ್ರತಿ ಅನುಬಂಧದಲ್ಲಿ ಒದಗಿಸಿದೆ)** |
| (ಇ) | ಚಿಕ್ಕನಾಯಕನಹಳ್ಳಿ ಎಪಿಎಂಸಿ ಮಾರುಕಟ್ಟೆಯ ವಾರ್ಷಿಕ ಆದಾಯ ಎಷ್ಟು; ಹುಳಿಯಾರು ಎಪಿಎಂಸಿ ಮಾರುಕಟ್ಟೆಯ ವಾರ್ಷಿಕ ಆದಾಯ ಎಷ್ಟು; ಈ ಎರಡು ಮಾರುಕಟ್ಟೆ ಯಲ್ಲಿ ಇರುವ ನೌಕರರು ಎಷ್ಟು; ಇದರಲ್ಲಿ ಕಾಯಂ ಸಿಬ್ಬಂದಿ ಎಷ್ಟು; ದಿನಗೂಲಿ ಸಿಬ್ಬಂದಿ ಎಷ್ಟು; (ವಿವರಗಳನ್ನು ಒದಗಿಸುವುದು) | ಚಿಕ್ಕನಾಯಕಹಳ್ಳಿಯು ಹುಳಿಯಾರು ಸಮಿತಿಯು ಉಪ ಮಾರುಕಟ್ಟೆಯಾಗಿರುತ್ತದೆ.<br>2024-25ನೇ ಸಾಲಿನಲ್ಲಿ ಚಿಕ್ಕನಾಯಕನಹಳ್ಳಿ ಎಪಿಎಂಸಿ ಮಾರುಕಟ್ಟೆಯಲ್ಲಿ ಮಾರುಕಟ್ಟೆ ಶುಲ್ಕ, ಬಳಕೆದಾರರ ಶುಲ್ಕ ಹಾಗೂ ಲೀವ್ ಅಂಡ್ ಲೈಸೆನ್ಸ್ ಶುಲ್ಕದಿಂದ ಬಂದಿರುವ ವಾರ್ಷಿಕ ಆದಾಯ ವಿವರ ಕೆಳಗಿನಂತಿದೆ:-<br>1. ಹುಳಿಯಾರು, ಕೃಉಮಾಸ - ರೂ.1,35,63,669/-<br>2. ಚಿಕ್ಕನಾಯಕನಹಳ್ಳಿ ಉಪ ಮಾರುಕಟ್ಟೆ- <u>ರೂ.47,97,654/-</u><br>ಒಟ್ಟು - **<u>ರೂ.1,83,61,323/-</u>**<br>ಹುಳಿಯಾರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ 10 ಹುದ್ದೆಗಳು ಮಂಜೂರಾಗಿದ್ದು, ಒಂದು ಕಾರ್ಯದರ್ಶಿ ಹುದ್ದೆ ಭರ್ತಿಯಾಗಿರುತ್ತದೆ. ಒಬ್ಬರು ಸಿಬ್ಬಂದಿ ಕಡೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಿಂದ ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿರುತ್ತಾರೆ.<br>ದಿನಗೂಲಿ ಸಿಬ್ಬಂದಿಗಳು ಯಾರೂ ಇರುವುದಿಲ್ಲ. |
| (ಈ) | ಚಿಕ್ಕನಾಯಕನಹಳ್ಳಿ ಎಪಿಎಂಸಿ ಮಾರುಕಟ್ಟೆಯಲ್ಲಿ ಪ್ರತಿ ಸೋಮವಾರ ರೈತ ಸಂತೆ ಮಾಡಲಾಗುತ್ತಿದೆಯೇ; ಎಂದಿನಿಂದ ಇಲ್ಲಿ ರೈತ ಸಂತೆ ಪ್ರಾರಂಭಿಸಲಾಗಿದೆ; ಇದರಿಂದ ಸಂಗ್ರಹ ಆಗುತ್ತಿರುವ ಶುಲ್ಕ/ತೆರಿಗೆ ಎಷ್ಟು; (ಮೂರು ವರ್ಷಗಳ ಅಂಕಿ ಅಂಶಗಳನ್ನು ನೀಡುವುದು) | ಪ್ರತಿ ಸೋಮವಾರ ಚಿಕ್ಕನಾಯಕನಹಳ್ಳಿ ಉಪ ಮಾರುಕಟ್ಟೆಯಲ್ಲಿ ತರಕಾರಿ ಸಂತೆ ನಡೆಸ ಲಾಗುತ್ತಿದೆ. ಸೆಪ್ಟೆಂಬರ್-2023 ರಿಂದ ತರಕಾರಿ ಸಂತೆ ಪ್ರಾರಂಭಿಸಲಾಗಿದ್ದು, ಕಳೆದ 03 ವರ್ಷಗಳಲ್ಲಿ ಸಂಗ್ರಹ ವಾಗಿರುವ ಬಳಕೆದಾರರ ಶುಲ್ಕದ ವಿವರ ಕೆಳಗಿನಂತಿದೆ:-<br>2022-23 - ರೂ.18,040/-<br>2023-24 - ರೂ.19,045/-<br>2025-26 - ರೂ.47,050/- **(ಜನವರಿ-2026ರ ಅಂತ್ಯಕ್ಕೆ)** |

| | | |
|---|---|---|
| ಉ) | ಸೋಮವಾರ ನಡೆಯುವ ರೈತ ಸಂತೆಯಲ್ಲಿ ಪುರಸಭೆಯವರು ತೆರಿಗೆ ಸಂಗ್ರಹ ಮಾಡಲು ಅವಕಾಶ ನೀಡಲಾಗಿದೆಯೇ; ಎಪಿಎಂಸಿಗೆ ಮೊದಲು ಪುರಸಭೆ ಇಲ್ಲಿ ಸಂತೆ ಮಾಡುತ್ತಿದ್ದುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಎಪಿಎಂಸಿ ಯಿಂದ ಚಿಕ್ಕನಾಯಕನಹಳ್ಳಿ ಪುರಸಭೆಗೆ ಆದಾಯ ಕುಂಠಿತ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಚಿಕ್ಕನಾಯಕನಹಳ್ಳಿ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಎಪಿಎಂಸಿಗೆ ಮೊದಲು ಪುರಸಭೆಯಿಂದ ಸಂತೆ ನಡೆಸಲಾಗುತ್ತಿತ್ತು. ಆದರೆ, ಈ ರೀತಿ ನಡೆಯುವ ತರಕಾರಿ ಸಂತೆಯಲ್ಲಿ ಪುರಸಭೆಯವರು ತೆರಿಗೆ ಸಂಗ್ರಹ ಮಾಡಲು ಅವಕಾಶ ಇರುವುದಿಲ್ಲ.<br><br>ಎಪಿಎಂಸಿಯಿಂದ ಚಿಕ್ಕನಾಯಕನಹಳ್ಳಿ ಪುರಸಭೆಗೆ ಆದಾಯ ಕುಂಠಿತವಾಗಿರುವ ವಿಷಯವು ಕೃಷಿ ಮಾರಾಟ ಇಲಾಖೆಯ ವ್ಯಾಪ್ತಿಗೆ ಒಳಪಡುವುದಿಲ್ಲ. |

**ಸಿಇ 79 ಎಂಆರ್ಇ 2026**

**(ಶಿವಾನಂದ ಎಸ್. ಪಾಟೀಲ)**
**ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ**
**ಹಾಗೂ ಕೃಷಿ ಮಾರುಕಟ್ಟೆ ಸಚಿವರು**